# ದೇಶ ಪ್ರೇಮ- ಮತ ಪ್ರೇಮ

ಪಾಶ್ಚಾತ್ಯ ಜನಪ್ರಿಯ ಕಥಾ ಸಾಹಿತ್ಯದಲ್ಲಿ ಸಾದಾರಣ ಕಳ್ಳ ಖದೀಮರು ಕೂಡ ದೇಶಪ್ರೇಮಿಗಳಂತೆ ಚಿತ್ರಿತವಾಗಿದ್ದಾರೆ! ಅವರು ತಮ್ಮ ದೇಶದಲ್ಲಿ ತಮ್ಮ ಹೊಟ್ಟೆಪಾಡಿಗೆ ದರೋಡೆ ಕಳ್ಳತನದಂತಹ ವೃತ್ತಿಯನ್ನು ಮಾಡಿ ಜೈಲು ಸೇರಿ ಶಿಕ್ಷೆ ಅನುಭವಿಸುತ್ತಾರೆ. ಕಳ್ಳತನ ಅವರಿಗೊಂದು ವೃತ್ತಿ. ಆದರೆ ದೇಶದ ಸಂರಕ್ಷಣೆಯ ವಿಷಯ ಬಂದಾಗ ಅಸೀಮ ದೇಶಭಕ್ತರಂತೆ ಹೋರಾಡುತ್ತಾರೆ; ತಮ್ಮ ಪ್ರಾಣ ತ್ಯಾಗ ಮಾಡಲು ಸಿದ್ಧರಾಗುತ್ತಾರೆ. ಅಲ್ಲಿನ ಗೃಹಿಣಿಯರು ತಾವು ಪ್ರೀತಿಸುತ್ತಿರುವ ವ್ಯಕ್ತಿ ದೇಶದ್ರೋಹಿ ಎಂದೋ ವಿದೇಶಿ ಗೂಢಾಚಾರನೆಂದೋ ತಿಳಿದುಬಂದಾಗ ಪ್ರೀತಿಯನ್ನು ಮೀರಿ ಅವನನ್ನು ಸಾಯಿಸುವ ಹಂತಕ್ಕೆ ಬೆಳೆಯುತ್ತಾರೆ. ಏಕೆಂದರೆ ಅವರಿಗೆ ಪ್ರೀತಿಗಿಂತ ದೇಶ ದೊಡ್ಡದು.

ನಮ್ಮ ರಾಜಕೀಯ ಮೀಮಾಂಸೆಯಲ್ಲಿ ಧರ್ಮ ಮತ್ತು ರಾಜಕಾರಣಗಳ ಸಂಬಂಧ ಮತ್ತು ಸ್ಥಾನಮಾನಗಳ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಗಾಂಧೀಜಿ ಮೂಲತಃ ಧಾರ್ಮಿಕ ಪ್ರೀತಿಯುಳ್ಳವರಾಗಿದ್ದರು. ಸನಾತನ ಮೌಲ್ಯಗಳನ್ನು ವರ್ತಮಾನ ಬದುಕಿನಲ್ಲಿ ಅನ್ವಯಿಸಿಕೊಳ್ಳಬೇಕೆಂದು ಹೇಳುತ್ತಿದ್ದರು. ಒಟ್ಟಾರೆಯಾಗಿ ಅವರದು ನೈತಿಕ ನೆಲೆಯ ಪ್ರಜ್ಞೆಯ ಬದುಕಾಗಿತ್ತು. ಆದುದರಿಂದ ಅವರು ಶುದ್ಧ ನಡೆ ನುಡಿಗಳನ್ನು ಆದರ್ಶವೆಂದು ತಿಳಿದು ಮಾದರಿಯಂತೆ ಬದುಕಿದರು. ಅವರಿಗೆ 'ಧರ್ಮವು' ರಾಜಕಾರಣದ ಹಿನ್ನೆಲೆಯಲ್ಲಿ ನಿಂತು ಕೆಲಸ ಮಾಡುವ ನೈತಿಕ ಸ್ಥೈರ್ಯದಂತಿರಬೇಕು. ಅದು ರಾಜಕಾರಣ ನಡೆಯನ್ನು ಸಲಹೆ, ಸೂಕ್ತ ಮಾರ್ಗದರ್ಶನದ ಮೂಲಕ ಮುನ್ನಡೆಸುವ ಗುರುವಿನಂತಿರಬೇಕೆ ಹೊರತು, ಅದೇ ಸ್ವಯಂ ನಿಯಂತ್ರಣ ಶಕ್ತಿಯಾಗಿರಬಾರದು; ಹಿನ್ನೆಲೆಯಲ್ಲಿ ನಿಂತು ಅಧಿಕಾರ ನಡೆಸುವ ಕಾವೀ ರೂಪದ ರಾಜಕಾರಣಿಯಾಗಬಾರದು. ಸ್ಥೂಲರೂಪದಲ್ಲಿ ಅಂಬೇಡ್ಕರ್ ಮತ್ತು ಡಾ. ಲೋಹಿಯಾ ಅವರ ಅಭಿಮತವೂ ಇದೇ ಆಗಿತ್ತು. ಏಕೆಂದರೆ ಚರಿತ್ರೆಯಲ್ಲಿ ಮತಧರ್ಮಗಳ ಆಳ್ವಿಕೆಯಿಂದ ಸಮಾಜದಲ್ಲಿ ಸೃಷ್ಟಿಯಾಗಿರುವ ಅಸಮಾನತೆಗಳು ಕಣ್ಣಮುಂದೆ ರಾಚಿದ್ದವು.

ವರ್ತಮಾನದ ಜಾಗತಿಕ ಸ್ವರೂಪವೇ ಇಂದು ಮತಶ್ರದ್ಧೆಯಿಂದ ಕೂಡಿದ್ದು- ಮಾನವ ಸಂಬಂಧಗಳ ನಡುವಿನ ಉದಾರವಾದಿ ಧೋರಣೆಯೇ ಮಾಯವಾಗುವಂತೆ ಮಾಡಿದೆ. ಇಪ್ಪತ್ತನೇ ಶತಮಾನದಲ್ಲಿ ಮೂಡಿಬಂದ ಮಾನವತವಾದ ಆಧಾರಿತ ಸಿದ್ಧಾಂತಗಳು ಧರ್ಮ ಮತಗಳಿಗಿಂತ ಸಮಾನತೆ ಸ್ವಾತಂತ್ರ್ಯಗಳು ಮುಖ್ಯವೆಂದು 'ಮನುಜ ಮತ'ವೇ ಬದುಕಿನ ಮಂತ್ರವಾಗಬೇಕೆಂದು ಘೋಷಿಸಿದ್ದವು. ಆ ಹಿನ್ನೆಲೆಯಲ್ಲಿ ಮತಧರ್ಮ ಶ್ರದ್ಧೆಗಳು ಹಿನ್ನೆಲೆಗೆ ಸರಿದು ಮಾನವ ಪರತೆ- ಜೀವಪರತೆಯನ್ನು ಕಾಯ್ದುಕೊಳ್ಳುವುದು ಪ್ರತಿಯೊಂದು ಸರ್ಕಾರದ- ರಾಜಕೀಯ ಸಿದ್ಧಾಂತದ- ಮುಖ್ಯ ಆಶಯವಾಗಿತ್ತು. ಮತ ಧರ್ಮಗಳಲ್ಲಿರುವ ಮೂಢನಂಬಿಕೆ ಅಂಧ ಶ್ರದ್ಧೆಗಳನ್ನು ಪರೀಕ್ಷಿಸಿ, ಬೇಡವಾದುದನ್ನು ತಿರಸ್ಕರಿಸಿ ತಿರುಳನ್ನು ಮಾತ್ರ ಸ್ವೀಕರಿಸುವ ಮನೋನೆಲೆ ಪ್ರಾಪ್ತವಾಯಿತು. ಕೆಲವು ರಾಜಕೀಯ ಸಿದ್ಧಾಂತಗಳು ಮತ ಧರ್ಮಗಳು ಬಿತ್ತುತ್ತಿರುವ ಮೌಢ್ಯಗಳು ಮತ್ತು ಅಸಮಾನತೆಗಳನ್ನು ಕಂಡು ಹೇಸಿ, ಬಹಿರಂಗವಾಗಿ ಮತಾಚರಣೆಗಳನ್ನು ಪಾಲಿಸುವ, ಪ್ರಚಾರ ಮಾಡುವ ಪ್ರಕ್ರಿಯೆಯನ್ನೇ ಕಾನೂನಾತ್ಮಕವಾಗಿ ರದ್ದುಗೊಳಿಸಿದವು. ಇಂಥ ತೀರ್ಮಾನಗಳು ಕೋಮುವಾದಿಗಳ ಕಣ್ಣುಗಳನ್ನು ಕಡು ಕೆಂಪಗೆ ಮಾಡಿದವು. ಆಧುನಿಕ ಶಿಕ್ಷಣ ಮತ್ತು ವಿಚಾರಧಾರೆಗಳು ಸಾಮಾಜಿಕ ಸ್ವಾಸ್ಥ್ಯವನ್ನು, ಒಂದು ಧಾರ್ಮಿಕ ನಂಬಿಕೆಯ ಜನರನ್ನು ಛಿದ್ರಗೊಳಿಸುತ್ತಿವೆಯೆಂದೂ ಅವರು ಅನೈತಿಕ ಪಥದಲ್ಲಿ, ಅಧಾರ್ಮಿಕವಾದ ಜೀವನ ಶೈಲಿಯಲ್ಲಿ, ದೈವ ವಿರೋಧಿ ಧೋರಣೆಯಲ್ಲಿ ಬೆಳೆಯುವಂತೆ ಮಾಡುತ್ತಿವೆಯೆಂದೂ ಸನಾತನವಾದಿಗಳು ಪ್ರಚಾರ ಮಾಡಿ ಮತ್ತಷ್ಟು ಬಿಗಿಯಾಗಿ ಮತ ಸಂಘಟನೆ ಮಾಡತೊಡಗಿದರು.

ಇದರ ಪರಿಣಾಮವನ್ನು ಜಗತ್ತಿನ ಬಹುಭಾಗದಲ್ಲಿಂದು ಕಾಣುತ್ತಿದ್ದೇವೆ. ಮೂಲಭೂತವಾದ ವೇಗವಾಗಿ ಸಮಾಜವನ್ನು ವ್ಯಾಪಿಸಿಕೊಳ್ಳುತ್ತಿದೆ. ಅತಾರ್ಕಿಕವಾದ ಸ್ವರ್ಗ ನರಕಗಳು, ದೇವರು- ದೆವ್ವಗಳ ನಂಬಿಕೆಗಳು ಮತ್ತು ಅವುಗಳನ್ನು ಒಲಿಸಿಕೊಳ್ಳಲು ನಿತ್ಯ ಮಾಡುತ್ತಿರುವ ಪೂಜೆ ವಾಮಾಚಾರಗಳು, ವಾಸ್ತವದ ಅರಿವನ್ನು ನಿರಾಕರಿಸುತ್ತ ಭವಿಷ್ಯವನ್ನು ಜೋತಿಷದ ಮೂಲಕ ಅರಿಯಲು ಯತ್ನಿಸುವ ಪಲಾಯನವಾದಗಳು- ಮುಂತಾದವುಗಳ ನಂಬಿಕೆಗಳು ಅಧಿಕವಾಗುತ್ತಿರುವುದು ಒಂದು ಕಡೆಯಾದರೆ, ಇವುಗಳೆಲ್ಲವನ್ನು ಸಮರ್ಥಿಸುವಂಥ ಪರೋಕ್ಷ ಮತ್ತು ನೇರ ಧಾರ್ಮಿಕ ಆಳ್ವಿಕೆಗಳು ಪ್ರಜಾಪ್ರಭುತ್ವ ಮೌಲ್ಯಗಳನ್ನು ಬಲಿ ತೆಗೆದುಕೊಳ್ಳುತ್ತಿವೆ.

ಇದರಿಂದಾಗಿ ಖಂಡ ಖಂಡಗಳನ್ನೇ ತಮ್ಮ ಮತಧರ್ಮಾಳ್ವಿಕೆಗೆ ತರಬೇಕೆಂಬ ಆಲೋಚನಾ ವಿಧಾನವೊಂದು ಬಲಗೊಳ್ಳುತ್ತಿರುವುದನ್ನು ಇಂದು ಜಾಗತಿಕ ಮಟ್ಟದಲ್ಲಿ ಗುರುತಿಸಬಹುದಾಗಿದೆ. ಇದರಿಂದ ಅನೇಕತೆಯ ವೈಭವಕ್ಕೆ, ಬಾಳ್ವಿಕೆಗೆ ಭಂಗಬರುವ ಅಪಾಯವಿದೆ. ವೈವಿಧ್ಯತೆಯ ಸೌಂದರ್ಯ ಸಹಬಾಳ್ವೆಗಳು ನಾಶವಾಗಿ ದೇಶಪ್ರೇಮ- ನಾಡ ಪ್ರೇಮಗಳು ಕಣ್ಮರೆಯಾಗುತ್ತವೆ. ದೇಶಕ್ಕಿಂತ ಜಾತಿ ಮತಗಳೇ ಮುಖ್ಯವೆಂದು ಹೋರಾಡುವಂಥ ದಿನಗಳು ಬರುತ್ತಿವೆಯೆಂಬ ಆತಂಕವಾಗುತ್ತದೆ.

■ **ಶಿಕಾಕು**

## ಮಾತೇ ಮುತ್ತು

★ ಪ್ರೇಮವೆಂಬ ಮಳೆಗಾಗಿ ಹಂಬಲಿಸಿದ ಹೆಣ್ಣಿಗೆ ಗಂಡನ ಕ್ರೌರ್ಯವೆಂಬ ಬರಸಿಡಿಲು ಎರಗಿದರೆ ಕೆಟ್ಟ ಪರಿಣಾಮ ಬೀರುತ್ತದೆ.

-ಸಂಚಿ ಹೊನ್ನಮ್ಮ

---

★ ಮಾತೃಭಾಷೆಯಲ್ಲಿ ಓದಲು, ಬರೆಯಲು ಬಾರದವರು ಬದುಕಿ ಉಳಿದಾರೆಯೇ? ನುಡಿಯಿಲ್ಲದ ನಾಡು ಕೊರಡು. ನುಡಿಯೇ ನಾಡಿನ ನಾಡಿ.

-ಮಿರ್ಜಿ ಅಣ್ಣಾರಾಯ

---

★ ನಿನ್ನ ಹೃದಯದಲ್ಲಿ ಪ್ರಾಮಾಣಿಕತೆ ತುಂಬಿದ್ದರೆ, ಒಬ್ಬ ಶತ್ರು ಮಾತ್ರವಲ್ಲ; ಇಡೀ ಪ್ರಪಂಚ ನಿನ್ನೆದುರು ಆಯುಧವನ್ನು ಕೆಳಗಿಡುತ್ತದೆ.

-ಸ್ವಾಮಿ ವಿವೇಕಾನಂದ

---

★ ನಡೆಯಲೇಬೇಕಾದ ವಿಧಿಯನ್ನು ಯಾರೂ ತಪ್ಪಿಸಿಕೊಳ್ಳಲಾಗುವುದಿಲ್ಲ. ಹಕ್ಕಿಯ ಬಾಲದಲ್ಲಿ ಬೆಂಕಿಯಿದ್ದರೆ, ಎಲ್ಲಿ ಹಾರಿದರೂ ಅಪಾಯದಿಂದ ತಪ್ಪಿಸಿಕೊಳ್ಳಲಾರದು.

-ರಾಜ ತರಂಗಿಣಿ

---

★ ರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ.

-ದ.ರಾ.ಬೇಂದ್ರೆ

---

★ ಅನ್ಯರು ತಪ್ಪು ಕಂಡುಹಿಡಿಯಲು ಸಾಧ್ಯವಾಗದ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡಬೇಕೆಂಬ ಹಠವಾದಿ ಯಾವುದೊಂದನ್ನೂ ಮಾಡಲಾರ.

-ಕಮರುನ್ನೀಸಾ

---

★ ಈ ದೇಶದ ಭವಿಷ್ಯ ದೇಶಭಕ್ತರೆಂಬ ದರೋಡೆಕೋರರಿಗೇ ಮೀಸಲಾದದ್ದು. ಇವರಲ್ಲಿ ಯಾವ ತೆರನ ದರೋಡೆಕೋರರ ಗುಂಪು ಮುಂದೆ ಬರುತ್ತದೆ ಎಂದು ಹೇಳುವುದು ಕಷ್ಟ.

-ಶಿವರಾಮ ಕಾರಂತ

---

★ ಪ್ರಜಾಪ್ರಭುತ್ವಗಳು ಅತಿ ವೈಭವದಿಂದಲೂ, ರಾಜ ಪ್ರಭುತ್ವಗಳು ಬಡತನದಿಂದಲೂ ನಾಶವಾಗುತ್ತವೆ.

-ಮಾಂಟೆಸ್ಕ್ಯೂ

---

★ ಪ್ರತಿಯೊಬ್ಬ ಮನುಷ್ಯ 'ತಾನಾಗಿರುವ' ಅವಕಾಶ ಕಲ್ಪಿಸುವುದೇ ಪ್ರಜಾಪ್ರಭುತ್ವದ ಮೊದಲ ದೊಡ್ಡ ಗುರಿ.

-ಡಿ.ಎಚ್.ಲಾರೆನ್ಸ್

---

★ ಬಹುಜನ ಮಾಡಿದುದೆ ಪಾಪವಾದರೂ ಪುಣ್ಯ! ಬಹುಜನರು ಸೇರಿದುದೆ ನರಕವಾದರೂ ಸ್ವರ್ಗ!

-ಕುವೆಂಪು

---

★ ಪ್ರೀತಿ, ಕರುಣೆ, ಸ್ನೇಹ, ಮರುಕ- ಇವೇ ನಮ್ಮ ದೇವರು. ಇಲ್ಲಿ ಇಲ್ಲ- ಜಾತಿಗೀತಿ, ಇಲ್ಲಿ ಇರುವುದೊಂದೆ ಪ್ರೀತಿ.

-ಜಿ.ಎಸ್.ಶಿವರುದ್ರಪ್ಪ

---

★ ಉರವಲಿನಲ್ಲಿ ಬೆಂಕಿ ಇರುವುದನ್ನು ತಿಳಿದವನು ಜ್ಞಾನಿ; ಆ ಬೆಂಕಿಯನ್ನು ಬಳಸಿಕೊಂಡು ಅಡುಗೆ ತಯಾರಿಸಿದವನು ವಿಜ್ಞಾನಿ.

-ರಾಮಕೃಷ್ಣ ಪರಮಹಂಸ

---

★ ಮನಸ್ಸನ್ನು ಸದಾ ಸಂತೋಷದಿಂದ ಮತ್ತು ಉಲ್ಲಾಸದಿಂದ ಇಟ್ಟರು. ಅದರಿಂದ ನೂರಾರು ಹಾನಿಗಳಿಂದ ಬಚಾವಾಗುತ್ತೀಯೆ. ದೀರ್ಘಾಯುಷ್ಯ ಹೊಂದುತ್ತೀಯೆ.

-ಸುಕರಾತ್

---

★ ಹಣದಿಂದ ಹಣದ ಹಸಿವು ಹೆಚ್ಚಾಗುತ್ತದೆಯೇ ಹೊರತು, ತೃಪ್ತಿ ಸಿಗಲಾರದು.

-ಪ್ರೇಮ್‌ಚಂದ್